



ಕೋಡಿಬೆಟ್ಟು ರಾಜಲಕ್ಷ್ಮಿ

# ಕಲೆಯ ಮೂಲಕ ಸತ್ಯ-ಸೌಂದರ್ಯದ ದೈವತ್ವದ ರೂಪಕ ಅನಾವರಣ

## ಒಡಿಸ್ಸಿ ನೃತ್ಯ ಕಲಾವಿದ ರಾಮ್ಲಿ ಇಬ್ರಾಹಿಂ ಸಂದರ್ಶನ

ಒಡಿಸ್ಸಿ ನೃತ್ಯ ಪರಂಪರೆಯಲ್ಲಿ ಮಿನುಗುವ ಹೆಸರು ರಾಮ್ಲಿ ಇಬ್ರಾಹಿಂ ಅವರದು. ಮಲೇಷ್ಯಾದ ಮುಸ್ಲಿಂ ಕುಟುಂಬದಲ್ಲಿ 1953ರ ಮೇ 20ರಂದು ಜನಿಸಿದ ರಾಮ್ಲಿ ಅವರ ಸಾಧನೆಯ ಹಾದಿ ದೀರ್ಘವಾದುದು. ಕಜಂಗ್‌ನ ಸೆಲಂಗೋರ್ ಅವರ ಹುಟ್ಟೂರು. ಇಬ್ರಾಹಿಂ ಮೊಹಮ್ಮದ್ ಅಮೀನ್ ಮತ್ತು ಕುಮಾರ್ಯಾ ಮೊಹಮ್ಮದ್ ಝಿನ್ ದಂಪತಿಯ ಮಗನಾಗಿ, ಉದಾರವಾದಿ ಕುಟುಂಬದಲ್ಲಿ ಬೆಳೆದರು. ಮಲೇಷ್ಯಾದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಅವರು, ಯೂನಿವರ್ಸಿಟಿ ಆಫ್ ಆಸ್ಟ್ರೇಲಿಯಾದಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ಪದವಿ ಮುಗಿಸುವ ವೇಳೆಗೆ ತನ್ನೊಳಗೆ ಅನುರಣಿಸುವ ಕಲಾಧ್ವನಿಯನ್ನು ಆಲಿಸಬಲ್ಲವರಾಗಿದ್ದರು. ಅಷ್ಟರಲ್ಲಾಗಲೇ ಭರತನಾಟ್ಯ ಮತ್ತು ಬ್ಯಾಲೆ ಕಲಿತಿದ್ದರು. ಭಾರತದ ಪ್ರಾಚೀನ ನೃತ್ಯಪ್ರಕಾರಗಳಲ್ಲಿ ಒಂದಾಗಿರುವ ಒಡಿಸ್ಸಿ ನೃತ್ಯವನ್ನು ನೋಡಿದ ಬಳಿಕ ಅವರಿಗೆ ತಮ್ಮ ಜೀವನದ ಧ್ಯೇಯವೇನೆಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವುದು ಸಾಧ್ಯವಾಯಿತು. ಅವರಲ್ಲಿರುವ ಕಲಾಚೇತನವನ್ನು ಗುರುತಿಸಿ ತಿದ್ದಿ ತೀಡಿದವರು ಒಡಿಸ್ಸಿ ನೃತ್ಯ ಗುರು ದೇಬಪ್ರಸಾದ್